ಒ ಎಸ್ ನಂ.**1656/2018**
ಪಿ.ಡಬ್ಲ್ಯೂಃ**1**

**ದಿನಾಂಕಃ 04.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀಮತಿ. ಅಮೃತಾ ಟಿ., ಪ್ರತಿವಾದಿ ಪರ ವಕೀಲರಿಂದಃ-**

ವಾದಿ ಕಂಪನಿ 2005 ರಲ್ಲಿ ಸ್ಥಾಪನೆಯಾಗಿದೆ. ವಾದಿ ಕಂಪನಿಯ ನೊಂದಣಿ ಸಂಖ್ಯೆ ನನಗೆ ನೆನಪಿಲ್ಲ. ದಾವೆ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಿಪಿ.3 ರಿಪ್ಲೈ ನೋಟಿಸ್ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೆನು. ನಿಪಿ.1 ಅಧಿಕಾರ ಪತ್ರದ ಆದಾರದ ಮೇಲೆ ಈ ದಾವೆ ಹೂಡಿದ್ದೇನೆ ಎನ್ನುವುದು ನಿಜ. ವಾದಿ ಕಂಪನಿಗೆ ಮೂರು ಜನ ನಿರ್ದೇಶಕರು ಇದ್ದಾರೆ. ವಾದಿ ಕಂಪನಿಗೆ ದಾವೆ ದಾಖಲಿಸುವ ಕಾಲಕ್ಕೂ ಮೂರು ಜನ ನಿರ್ದೇಶಕರು ಇದ್ದರು. ವಾದಿ ಕಂಪನಿಗೆ ನಾನು ವ್ಯವಸ್ಥಾಪಕ ನಿರ್ದೇಶಕನಾಗಿದ್ದೇನೆ. ವಾದಿ ಕಂಪನಿಗೆ ದಾವೆ ದಾಖಲಿಸುವ ಕಾಲಕ್ಕೆ ನಾನೇ ವ್ಯವಸ್ಥಾಪಕ ನಿರ್ದೇಶಕನಾಗಿದ್ದೆನು. ಬಿ.ಕೆ. ವಿವೇಕ್ ಮತ್ತು ಕೆ. ಎನ್. ಅಪರ್ಣ ಉಳಿದ ಇಬ್ಬರು ನಿರ್ದೇಶಕರಾಗಿದ್ದಾರೆ. ಈಗ ಬಿ.ಕೆ. ವಿವೇಕ್ ಜಾಗಕ್ಕೆ ಆತನ ಹೆಂಡತಿ ದೀಪಾ ನಿರ್ದೇಶಕಿಯಾಗಿದ್ದಾಳೆ. ವಾದಿ ಕಂಪನಿ ಅಪಾರ್ಟ್ ಮೆಂಟ್ ಕಟ್ಟಿರುವ ಜಾಗ ಪ್ರಾಪರ್ಟಿ ನಂ.1113 ಆಗಿದ್ದು ಅದರ ಒಟ್ಟು ವಿಸ್ತೀರ್ಣ 2400 ಚದರ ಅಡಿ ಇರುತ್ತದೆ. ಅಪಾರ್ಟ್ ಮೆಂಟ್ ಕಟ್ಟುವ ಮುಂಚೆ 2015 ರಲ್ಲಿ ಅದರ ಪ್ಲಾನ್ ಮಂಜೂರು ಮಾಡಿಕೊಂಡಿದ್ದೆವು. ಮಂಜೂರಾದ ಪ್ಲಾನ್ ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲ. ನಮಗೆ ಪ್ಲಾನ್ ಪ್ರಕಾರ ತಳಮಹಡಿ, ನೆಲಮಹಡಿ ಮತ್ತು ಅದರ ಮೇಲೆ ಎರಡು ಫ್ಲೋರ್ ಕಟ್ಟಲು ಅನುಮತಿ ನೀಡಿದ್ದರು. ಒಂದೊಂದು ಫ್ಲೋರ್ ನಲ್ಲಿ ಒಂದೊಂದು **ಪ್ಲ್ಯಾಟ್** ಕಟ್ಟಲು ಅನುಮತಿ ನೀಡಿದ್ದರು.

ನಾವು ನೆಲಮಹಡಿಯಲ್ಲಿ ಎರಡು, ಮೊದಲನೇ ಮಹಡಿಯಲ್ಲಿ ಒಂದು, ಮತ್ತು ಎರಡನೇ ಮಹಡಿಯಲ್ಲಿ ಒಂದು **ಪ್ಲ್ಯಾಟ್ ನ್ನು** ಕಟ್ಟಿದ್ದೆವು. ನೆಲಮಹಡಿಯಲ್ಲಿನ ಪ್ರತಿಯೊಂದು **ಪ್ಲ್ಯಾಟ್** ನ ವಿಸ್ತೀರ್ಣ ಅಂದಾಜು 700 ಚದರ ಅಡಿ ಇರುತ್ತದೆ. ಮೊದಲನೇ ಮತ್ತು ಎರಡನೇ ಮಹಡಿಯ **ಪ್ಲ್ಯಾಟ್** ಗಳ ವಿಸ್ತೀರ್ಣ ಅಂದಾಜು ತಲಾ 2000 ಚದರ ಅಡಿ ಇರುತ್ತದೆ. ಸದರಿ **ಪ್ಲ್ಯಾಟ್** ಗಳ ನಿಖರವಾದ ವಿಸ್ತೀರ್ಣ ಹೇಳಲು ಬರುವುದಿಲ್ಲ. ತಳಮಹಡಿಯಲ್ಲಿ 7 ಕಾರ್ ಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಲಿಫ್ಟ್ ವ್ಯವಸ್ಥೆ ಮಾಡಲಾಗಿದೆ. ದಾವೆ ದಾಖ್ಲಿಸುವ ಕಾಲಕ್ಕೆ ವಾದಿ ಕಂಪನಿಗೆ ಮೂರು ಬ್ಯಾಂಕ್ ಗಳಲ್ಲಿ ಖಾತೆಗಳು ಇದ್ದವು. ಅವುಗಳು 1. ಕಾರ್ಪೋರೇಷನ್ ಬ್ಯಾಂಕ್, 2. ಕೋಟಕ್ ಮಹೀಂದ್ರ

ಒ ಎಸ್ ನಂ.**1656/2018**
ಪಿ.ಡಬ್ಲ್ಯೂ:**1**

ಬ್ಯಾಂಕ್ ಮತ್ತು 3. ಬ್ಯಾಂಕ್ ಆಫ್ ಬರೋಡಾ. ಅಕೌಂಟ್ ನಂಬರ್ ಗಳು ನೆನಪಿಲ್ಲ. ಈಗ ಕೇವಲ ಬ್ಯಾಂಕ್ ಆಫ್ ಬರೋಡಾ ಅಕೌಂಟ್ ಮಾತ್ರ ಆಪರೇಟ್ ಮಾಡುತ್ತಿದೆ. ಉಳಿದ ಎರಡು ಅಕೌಂಟ್ ಗಳನ್ನು ಕ್ಲೋಸ್ ಮಾಡಲಾಗಿದೆ. ಯಾವಾಗ ಕ್ಲೋಸ್ ಮಾಡಲಾಗಿದೆ ಎನ್ನುವುದು ನನಗೆ ನೆನಪಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**